RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| ಭಾಗ–I | ಬೆಂಗಳೂರು, ಬುಧವಾರ, ಜನವರಿ ೩, ೨೦೧೮ (ಪುಷ್ಯ ೧೩, ಶಕ ವರ್ಷ ೧೯೩೯) | ನಂ. ೧೭ |
|---|---|---|
| Part–I | Bengaluru, Wednesday, January 3, 2018 (Pushya 13, Shaka Varsha 1939) | No. 17 |


### ಕರ್ನಾಟಕ ಸರ್ಕಾರದ ನಡವಳಿಗಳು

### ಆರ್ಥಿಕ ಸಚಿವಾಲಯ

**ವಿಷಯ:** ತೆರಿಗೆ ತಪ್ಪಿಸುವವರ ಬಗ್ಗೆ ಸುಳಿವು ನೀಡುವವರಿಗೆ ಪುರಸ್ಕಾರ ನೀಡುವ ಯೋಜನೆಯನ್ನು 2017–18ರಿಂದ 2019–20ನೇ ಸಾಲುಗಳವರೆಗೆ ವಿಸ್ತರಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಆಇ 72 ಸಿಇಎಕ್ಸ್ 1984, ದಿನಾಂಕ 28/02/1985.
2. ಸರ್ಕಾರದ ಆದೇಶ ಸಂಖ್ಯೆ:ಆಇ 165 ಸಿಎಸ್‌ಒ 1994, ದಿನಾಂಕ 12/12/1994.
3. ಸರ್ಕಾರದ ಆದೇಶ ಸಂಖ್ಯೆ:ಆಇ 199 ಸಿಎಸ್‌ಎಲ್ 2004, ದಿನಾಂಕ 07/09/2004.
4. ಸರ್ಕಾರದ ಆದೇಶ ಸಂಖ್ಯೆ:ಆಇ 388 ಸಿಎಸ್‌ಎಲ್ 2005, ದಿನಾಂಕ 30/08/2005.
5. ಸರ್ಕಾರದ ಆದೇಶ ಸಂಖ್ಯೆ:ಆಇ 419 ಸಿಎಸ್‌ಎಲ್ 2006, ದಿನಾಂಕ 07/03/2007.
6. ಸರ್ಕಾರದ ಆದೇಶ ಸಂಖ್ಯೆ:ಆಇ 419 ಸಿಎಸ್‌ಎಲ್ 2007, ದಿನಾಂಕ 16/11/2007 ಮತ್ತು ದಿನಾಂಕ 14/08/2008.
7. ಸರ್ಕಾರದ ಆದೇಶ ಸಂಖ್ಯೆ:ಆಇ 73 ಸಿಎಸ್‌ಎಲ್ 2009, ದಿನಾಂಕ 21/04/2010.
8. ಸರ್ಕಾರದ ಆದೇಶ ಸಂಖ್ಯೆ:ಆಇ 160 ಸಿಎಸ್‌ಎಲ್ 2012, ದಿನಾಂಕ 07/09/2012.
9. ಸರ್ಕಾರದ ಆದೇಶ ಸಂಖ್ಯೆ:ಆಇ 85 ಸಿಎಸ್‌ಎಲ್ 2016, ದಿನಾಂಕ 07/12/2016.
10. ವಾಣಿಜ್ಯ ತೆರಿಗೆಗಳ ಆಯುಕ್ತರ ಪತ್ರ ಸಂಖ್ಯೆ:ವಾತೆಅಆ (ಗು&ಸ)/ಉಅ/ಇತರೆ/ಹೆಚ್/ಸಿಆರ್–10/16–17, ದಿನಾಂಕ 22/03/2017, 21/06/2017 ಮತ್ತು 07/10/2017.

**ಪ್ರಸ್ತಾವನೆ:**

ಮೇಲೆ (1)ರಿಂದ (9)ರವರೆಗೆ ಓದಲಾದ ಸರ್ಕಾರದ ಆದೇಶಗಳಲ್ಲಿ, ತೆರಿಗೆ ತಪ್ಪಿಸುವವರ ಬಗ್ಗೆ ಸುಳಿವು ನೀಡುವವರಿಗೆ ಪುರಸ್ಕಾರ ನೀಡುವ ಯೋಜನೆಯನ್ನು ದಿನಾಂಕ 31/03/2017ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ (10)ರಲ್ಲಿ ಓದಲಾದ ಪತ್ರದಲ್ಲಿ, ತೆರಿಗೆ ತಪ್ಪಿಸುವವರ ಬಗ್ಗೆ ಸುಳಿವು ನೀಡುವವರಿಗೆ ಪುರಸ್ಕಾರ ನೀಡುವ ಯೋಜನೆಯನ್ನು 2017–18ರಿಂದ 2019–20ನೇ ಸಾಲುಗಳಿಗೂ ವಿಸ್ತರಿಸುವಂತೆ ವಾಣಿಜ್ಯ ತೆರಿಗೆಗಳ ಆಯುಕ್ತರು ಕೋರಿರುತ್ತಾರೆ ಹಾಗೂ ಈ ಮೊತ್ತವನ್ನು ಈಗಾಗಲೇ ನೀಡಲಾಗಿರುವ "2040–00–001–0–01–015–Subsidiary Expenses (SE)" ಲೆಕ್ಕ ಶೀರ್ಷಿಕೆಯಡಿ ಭರಿಸಲಾಗುವುದೆಂದು ಹಾಗೂ ಪುರಸ್ಕಾರ ಧನವನ್ನು ರೂ.20,000/–ದಿಂದ ರೂ.50,000/–ದವರೆಗೆ ಹೆಚ್ಚಿಸಿದಲ್ಲಿ ಮಾಹಿತಿದಾರರು ಹೆಚ್ಚಿನ ಪ್ರಕರಣಗಳನ್ನು ಗುರುತಿಸಿ ಇಲಾಖೆಗೆ ಮಾಹಿತಿಯನ್ನು ನೀಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ದಂಡ ಮತ್ತು ತೆರಿಗೆ ಸಂಗ್ರಹಿಸಲು ಅನುಕೂಲವಾಗುತ್ತದೆ ಎಂಬ ಅಂಶವನ್ನು ಸಹ ತಿಳಿಸಿರುತ್ತಾರೆ.

ವಾಣಿಜ್ಯ ತೆರಿಗೆಗಳ ಆಯುಕ್ತರ ಕೋರಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಹಾಲಿ ಇರುವ ಪುರಸ್ಕಾರ ಯೋಜನೆಯನ್ನು 2017-18, 2018-19 ಮತ್ತು 2019-20ನೇ ಸಾಲುಗಳಿಗೂ ಕೂಡ ಮುಂದುವರಿಸಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಆಇ 28 ಸಿಎಸ್‌ಎಲ್ 2017, ಬೆಂಗಳೂರು, ದಿನಾಂಕ 03/01/2018**

ಆದೇಶ ಸಂಖ್ಯೆ:ಆಇ 165 ಸಿಎಸ್‌ಓ 94. ದಿನಾಂಕ 12/12/1994ರಲ್ಲಿ ನಮೂದಿಸಲಾದ ವಿಧಾನ ಮತ್ತು ಷರತ್ತಿಗೆ ಒಳಪಟ್ಟಂತೆ ತೆರಿಗೆ ತಪ್ಪಿಸುವವರ ಬಗ್ಗೆ ಸುಳಿವು ನೀಡುವವರಿಗೆ ಪುರಸ್ಕಾರ ನೀಡುವ ಯೋಜನೆಯನ್ನು ದಿನಾಂಕ 01/04/2017ರಿಂದ 31/03/2020ರವರೆಗೆ ವಿಸ್ತರಿಸಿ ಈ ಕೆಳಗಿನಂತೆ ಆದೇಶಿಸಿದೆ:

1. ಮಾಹಿತಿದಾರರಿಗೆ, ಇಲಾಖೆಯ ಎಲ್ಲಾ ಕಾಯ್ದೆಗಳಡಿಯಲ್ಲಿ ಬರುವ ವರ್ತಕರಿಗೆ ಸಂಬಂಧಿಸಿದಂತೆ ವಂಚಿತ ತೆರಿಗೆಯ ಶೇಕಡ 10ರಷ್ಟು ಮೊತ್ತವನ್ನು (ರೂ.50,000/-ಕ್ಕೆ ಮೀರದಂತೆ) ಪುರಸ್ಕಾರವಾಗಿ ನೀಡಬಹುದು.
2. ಪ್ರಾರಂಭಿಕ ಪುರಸ್ಕಾರ: ವಾಣಿಜ್ಯ ತೆರಿಗೆ ಆಯುಕ್ತರು; ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು; ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ) / ಜಾರಿ / (ಆಡಳಿತ) ಇವರುಗಳು ವಂಚನೆ ಪತ್ತೆ ಮಾಡಿದ ಕೂಡಲೇ ಪುರಸ್ಕಾರ ಮೊತ್ತದ ಶೇಕಡ 5ರಷ್ಟು ಮೊತ್ತವನ್ನು (ರೂ.25,000/-ಕ್ಕೆ ಮೀರದಂತೆ) ಬಿಡುಗಡೆ ಮಾಡಬಹುದು.
3. ಅಂತಿಮ ಪುರಸ್ಕಾರ: ವಾಣಿಜ್ಯ ತೆರಿಗೆ ಆಯುಕ್ತರು; ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು; ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ) / ಜಾರಿ / (ಆಡಳಿತ) ಇವರುಗಳು ಪ್ರಕರಣವು ಅಂತಿಮ ಘಟ್ಟ ತಲುಪಿದ ನಂತರ ಅಂದರೆ ಮರುಕರನಿರ್ಧರಣೆ, ಮನವಿ, ಸ್ವಯಂ ಪರಿಷ್ಕರಣೆ, ಪುನ: ಮರುಕರನಿರ್ಧರಣೆ ಮುಗಿದು, ವಂಚಿಸಿದ ಪೂರ್ಣ ತೆರಿಗೆ ಮೇಲಿನ ಬಡ್ಡಿ ಹಾಗೂ ದಂಡ ವಸೂಲಿಯಾದ ನಂತರ (ಬಡ್ಡಿ ಮತ್ತು ದಂಡದ ಮೊತ್ತವನ್ನು ಹೊರತುಪಡಿಸಿ) ಉಳಿದ ಶೇಕಡ 5ರಷ್ಟು ಮೊತ್ತವನ್ನು (ಒಟ್ಟು ಪುರಸ್ಕಾರ ಮೊತ್ತ ರೂ.50,000/-ಕ್ಕೆ ಮೀರದಂತೆ) ಬಿಡುಗಡೆ ಮಾಡಬಹುದು.

ಮೇಲಿನ ಕಂಡಿಕೆಗಳು (1), (2) ಮತ್ತು (3)ರಲ್ಲಿ ನಮೂದಿಸಿರುವಂತೆ ಇಲಾಖೆಯ ಎಲ್ಲಾ ಕಾಯ್ದೆಗಳಡಿಯಲ್ಲಿ ಬರುವ ವರ್ತಕರಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವ ಮಾಹಿತಿದಾರರಿಗೆ ಲೆಕ್ಕ ಶೀರ್ಷಿಕೆ "2043-00-001-0-01-015-Subsidiary Expenses (SE)" ಅಡಿಯಲ್ಲಿ ಪುರಸ್ಕಾರದ ಮೊತ್ತವನ್ನು ನೀಡಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಎಸ್. ಪದ್ಮಾವತಿ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ [ವಾ.ತೆ-1].

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 50